# ಹುಲಿಮಂಗಲ ಗ್ರಾಮ ಪಂಚಾಯಿತಿ ಕಾರ್ಯಾಲಯ

**ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 105.**

ರವರಿಗೆ ,

ದಿನಾಂಕ :..13-11-2023

**ಆಯುಕ್ತರು,**
**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,**
**5ನೇ ಮುಖ್ಯರಸ್ತೆ, ಕುಮಾರಪಾರ್ಕ್ ವೆಸ್ಟ್,**
**ಗುಟ್ಟಹಳ್ಳಿ,ಬೆಂಗಳೂರು–56020**

ಮಾನ್ಯರೇ

**ವಿಷಯ :– ನೀರು ಸರಬರಾಜಿಗೆ ಎನ್.ಓ.ಸಿ ನೀಡುವ ಬಗ್ಗೆ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹುಲಿಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಲಿಮಂಗಲ ಗ್ರಾಮದ ಸರ್ವೆ ನಂಬರ್ 333/1 ಮತ್ತು 333/2 ರ ಜಮೀನು ಶ್ರೀ ಹೆಚ್.ಟಿ.ಸೋಮಶೇಖರ ರೆಡ್ಡಿ ಮತ್ತು ಶ್ರೀಮತಿ ಹೆಚ್.ಎಸ್.ನಾಗಮಣಿ ರವರ ಹೆಸರಿನಲ್ಲಿ ಸಂಖ್ಯೆ: 394936 ,ದಿನಾಂಕ:28.09.2022 ಮತ್ತು ಸಂಖ್ಯೆ: 394931, ದಿನಾಂಕ:28.09.2022, ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಸರ್ವೆ ನಂಬರ್ ನ ಜಮೀನಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಸತಿ ಕಟ್ಟಡಗಳಿಗೆ ನೀರು ಪೂರೈಸಲು ಮನವಿ ಪತ್ರವನ್ನು ಸದರಿ ಸರ್ವೆ ನಂಬರಿನ ಅರ್ಜಿದಾರರು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದು, ನೀರು ಸರಬರಾಜಿಗೆ ಎನ್.ಓ.ಸಿ ನೀಡಲು ಕೋರಿರುತ್ತಾರೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಸಾರ್ವಜನಿಕರಿಗೆ ನೀರಿನ ಸೌಲಭ್ಯ ಒದಗಿಸಿ ಉಳಿಕೆ ನೀರನ್ನು ಸದರಿ ಉದ್ದೇಶಿತ ಸ್ವತ್ತಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೀರು ಸರಬರಾಜಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

1.ನೀರು ಸರಬರಾಜು ಸಂಬಂಧಿಸಿದಂತೆ ಸಂಪೂರ್ಣ ವೆಚ್ಚವನ್ನು ಮನವಿ ಪತ್ರದಲ್ಲಿ ತಿಳಿಸಿರುವಂತೆ ಅರ್ಜಿದಾರರ ಭರಿಸಬೇಕು.

2.ಯೋಜನಾ ಪ್ರಾಧಿಕಾರದ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3.ಪ್ರಸ್ತುತವಿರುವ ನಿಯಮ/ಕಾನೂನುಗಳಿಗೆ ವಿರುದ್ದವಾಗಿ ತಾವು ಬಡಾವಣೆ ನಿರ್ಮಾಣ ಮಾಡಿದಲ್ಲಿ ಮತ್ತು ಸಾರ್ವಜನಿಕರಿಂದ ಯಾವುದೇ ನ್ಯಾಯಬದ್ದ ದೂರುಗಳು ಬಂದಲ್ಲಿ ಈ ನಿರಾಕ್ಷೇಪಣಾ ಪತ್ರವನ್ನು ರದ್ದುಪಡಿಸಲಾಗುವುದು.

ತಮ್ಮ ವಿಶ್ವಾಸಿ

13/11/2023

ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಹುಲಿಮಂಗಲ ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

**ಪ್ರತಿಯನ್ನು :**

1.ಶ್ರೀ ಹೆಚ್.ಟಿ.ಸೋಮಶೇಖರ ರೆಡ್ಡಿ ಮತ್ತು ಶ್ರೀಮತಿ ಹೆಚ್.ಎಸ್.ನಾಗಮಣಿ ಕೋರಮಂಗಲ ಬೆಂಗಳೂರು–560034 ರವರ ಮಾಹಿತಿಗಾಗಿ.